ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.2415/2022

ಸಿ.ಡಬ್ಲ್ಯೂ:3 ಪಿ.ಡಬ್ಲ್ಯೂ:2

ಸಾಕ್ಷಿಗೆ ದಿನಾಂಕ 21/12/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ದೀಪಕ |
| ತಂ/ಗಂ. ಹೆಸರು | ಹೀರು ಚವಾಣ |
| ವಯಸ್ಸು | 46 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಪಡಗಾನೂರ ತಾಂಡಾ |

ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ

ದಿನಾಂಕ 21-11-2022 ರಂದು ಪೋಲಿಸರು ನನಗೆ ಹಂದಿಗನೂರ ಗ್ರಾಮದ ಜಮೀನು ಸರ್ವೇ ನಂಬರ 222 ಕ್ಕೆ ಕರೆಸಿದ್ದರು. ಸದರಿ ಪಂಚನಾಮೆಗೋಸ್ಕರ ನನ್ನನ್ನು ಕರೆಯಿಸಿದ್ದರು. ನಾನು ಚಾ ಸಾ 1 ಮತ್ತು 4 ರವರು ಇದ್ದೇವು. ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 12 ಗಂಟೆಯ ಒಳಗಡೆ ಮಾಡಿರುತ್ತಾರೆ. ಹೆಣ್ಣು ಮಕ್ಕಳು ಜಗಳ ಮಾಡಿದ ಕಾರಣ ಪೋಲಿಸರು ನನಗೆ ಫೋನ್ ಮಾಡಿ ಪಂಚನಾಗಲು ಕೇಳಿದ್ದರಿಂದ ನಾನು ಪಂಚನಾಗಲು ಹೋಗಿರುತ್ತೇನೆ. ಅಲ್ಲಿ ಸ್ಥಳದಲ್ಲಿ ಪಂಚನಾಮೆ ತಯಾರಿಸಿ ನಮ್ಮನ್ನು ನಿಲ್ಲಿಸಿ ಒಂದು ಭಾವ ಚಿತ್ರ ತೆಗೆದಿರುತ್ತಾರೆ ನಂತರ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಪಿ ಎಸ್ ಬಿ ವಕೀಲರಿಂದ

ಪಡಗಾನೂರ ಗ್ರಾಮಕ್ಕೆ ಬಂದು 6 ವರ್ಷಗಳಾಗಿವೆ. ಚಾ ಸಾ 2 ನನ್ನ ಸಂಬಂಧಿಕಳು ಎಂದರೆ ನಿಜ. ಪಂಚನಾಮೆ ಮಾಡಲು ಪೋಲಿಸರು ನನಗೆ ಲಿಖಿತ ನೋಟಿಸ್ ನೀಡಿಲ್ಲ. ಪಂಚನಾಮೆ ಮಾಡಲು ನಾನು ಮೊದಲು ಹಂದಿಗನೂರ ಗ್ರಾಮಕ್ಕೆ ಬಂದಿರಲ್ಲಿ ಪೋಲಿಸರು ಕರೆಸಿದ್ದರು. ಪೋಲಿಸರು ದಿನಾಂಕ 21-11-2022 ರಂದು ಬೆಳಿಗ್ಗೆ 10 ಗಂಟೆಗೆ ಬರಲು ಪೋಲಿಸರು ಹೇಳಿದ್ದರು. ಪೋಲಿಸ್ ಠಾಣೆಗೆ ಬೆಳಿಗ್ಗೆ 10 ಗಂಟೆಗೆ ಹೋಗಿದ್ದೇವು. ಪೋಲಿಸ್ ಠಾಣೆಗೆ ನಾನು ಒಬ್ಬನೇ ಹೋಗಿದ್ದೆ ಅಲ್ಲಿ ಪೋಲಿಸರು ಮತ್ತು ನಾವು ಕೂಡಿ ಹೋಗಿರುತ್ತೇವೆ. ಚಾ ಸಾ 4 ನನಗೆ ಪರಿಚಯ ಇಲ್ಲ ಅವರು ಅದೇ ತಾಂಡಾದವರು. ನಾವು ಮೊದಲು ಕೆರುಟಗಿ ತಾಂಡಾಕ್ಕೆ ಹೋಗಿ ನಂತರ ಜಮೀನಿಗೆ ಹೋಗಿರುತ್ತೇವೆ. ದೇವರ ಹಿಪ್ಪರಗಿಯಿಂದ ಕೆರುಟಗಿಯಿಂದ ತಾಂಡಾಕ್ಕೆ ಹೋಗಲು 1 ಗಂಟೆ ಬೇಕಾಗಿತ್ತು. ಪೋಲಿಸರು ತಾಂಡಾದಲ್ಲಿ ಯಾರನ್ನು ಕರೆದಿಲ್ಲ. ಆ ದಿನ ತಾಂಡಾದಿಂದ ಜಮೀನಿಗೆ ಹೋದಾಗ 11 ಗಂಟೆ ಆಗಿತ್ತು. ಕೆರುಟಗಿ ತಾಂಡಾ ಮತ್ತು ಜಮೀನು 2 ಕಿ ಮೀ ಅಂತರದಲ್ಲಿದೆ ಎಂದರೆ ನಿಜ. ಕೋರವಾರ ಹಂದಿಗನೂರ ಕೆರುಟಗಿ ರಸ್ತೆ ಮೂಲಕ ಹೋಗಿರುತ್ತೇವೆ. ಘಟನೆ ಸ್ಥಳಕ್ಕೆ ಚೆಕ್ಕಬಂದಿ ಪೂರ್ವಕ್ಕೆ ಬಾಬು ಚವಾಣ, ಪಶ್ಚಿಮಕ್ಕೆ ಮೋಹನ ರಾಠೋಡ, ಉತ್ತರಕ್ಕೆ ವಸಂತ ಚವಾಣ

ಮತ್ತು ದಕ್ಷಿಣಕ್ಕೆ ಲಕ್ಷ್ಮೀಬಾಯಿ ಇವರ ಜಮೀನು ಇದೆ. ಭಾವ ಚಿತ್ರ ತೆಗೆಯಲು ಯಾರು ಪೋಟೋಗ್ರಾಫರ ಬಂದಿರಲಿಲ್ಲ. ಪೋಲಿಸರೇ ಪಂಚನಾಮೆ ತಯಾರಿಸಿ ನಮ್ಮ ಸಹಿ ಪಡೆದಿರುತ್ತಾರೆ. ಚಾ ಸಾ 1 ನನ್ನ ಸಂಬಂಧಿಕನಿರುವುದರಿಂದ ಯಾವುದೇ ಘಟನೆ ಆಗದಿದ್ದರು ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ